**<u>ದಿನಾಂಕಃ 12-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಫ್.ಎಂ.ಎಂ. ವಕೀಲರಿಂದಃ</u>**

13. ಈಗ ಸಾಕ್ಷಿಗೆ ನಿಡಿ-7 ದಾನ ಪತ್ರದ ಮೇಲಿರುವ 4 ನೇ ಪುಟದ ಮೇಲಿರುವ ನಿಡಿ-7 ಎ ಎಂದು ಗುರುತಿಸಲಾದ ಸಹಿಯನ್ನು ತೋರಿಸಿ ಸದರಿ ಸಹಿ ಯಾರದ್ದು ಎಂದು ಕೇಳಲಾಗಿ ಸಾಕ್ಷಿ ಸದರಿ ಸಹಿ ಸಿದ್ದನಗೌಡ ಬಸನಗೌಡ ಪಾಟೀಲರವರದ್ದು ಎಂದು ಹೇಳುತ್ತಾರೆ. ನಿಡಿ-7 ರ ಮೇಲಿರುವ ಪ್ರತಿ ಪುಟದ ಮೇಲಿರುವ ಶಿ.ಹೆ.ಪಾಟೀಲ ಎಂಬ ಸಹಿಗಳು ಹಾಗೂ ನಿಡಿ-7 ಎ ಸಹಿ ಒಬ್ಬರೇ ವ್ಯಕ್ತಿ ಮಾಡಿದ ಸಹಿಗಳು ಎಂದರೆ ಸಾಕ್ಷಿ ನಿಡಿ-7 ಎ ಸಹಿಗೂ ಉಳಿದ ಸಹಿಗಳಿಗೂ ವ್ಯತ್ಯಾಸ ಇದೆ ಎನ್ನುತ್ತಾರೆ. ಸದರಿ ನಾನು ಹೇಳಿದ ಹಾಗೇ ಸದರಿ ಸಹಿಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಎಂದರೆ ಸರಿಯಲ್ಲ. ಸದರಿ ನಿಡಿ-7 ಎ ಸಹಿ ಶಿದ್ದನಗೌಡ ಬಸನಗೌಡ ಪಾಟೀಲರವರ ಸಹಿ ಎಂದರೆ ಸರಿ. ಸದರಿ ಶಿದ್ದನಗೌಡ ಬಸನಗೌಡ ಪಾಟೀಲರವರೇ ನಿಡಿ-7 ರ ಉಳಿದ ಪ್ರತಿ ಪುಟಕ್ಕೂ ಶಿ.ಹೆ.ಪಾಟೀಲ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಿದ್ದನಗೌಡ ಹನುಮನಗೌಡ ಪಾಟೀಲರವರು ಮಂತನಗೌಡ ಪಾಟೀಲರವರ ತಂದೆ ಎಂದರೆ ಸರಿ. ಸಾಕ್ಷಿದಾರರು ಉಪನೊಂದಾಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜಿನ ಮೇಲೆ ಸಹಿಯನ್ನು ಉಪನೊಂದಣಾಧಿಕಾರಿಯವರ ಸಮಕ್ಷಮ ಮಾಡಿರುತ್ತಾರೆ ಎಂದರೆ ಸರಿ. ನಿಡಿ-7 ಡಿ ಸಹಿಯನ್ನು ಶಿದ್ದನಗೌಡ ಬಸನಗೌಡ ಪಾಟೀಲ ರವರೇ ಮಾಡಿರುತ್ತಾರೆ ಎಂದರೆ ಸರಿ.

14. ದಾವಾ ಸರ್ವೆ ನಂ.10 ವಾದಿ ಮತ್ತು ಪ್ರತಿವಾದಿಯರ ಏಕತ್ರ ಘರಾಣೆಯ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶಿವನಗೌಡರವರು ಖರೀದಿ ಹಿಡಿದ ಆಸ್ತಿಗಳು ಎನ್ನುತ್ತಾರೆ. ಸದರಿ ಶಿವನಗೌಡ ಹೇಮನಗೌಡ ಪಾಟೀಲರವರು ಪಿತ್ರಾರ್ಜಿತ ಘರಾಣೆಯ ಆಸ್ತಿಗಳಿಂದ ಬಂದ ಆದಾಯದಿಂದ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಹೇಮನಗೌಡ ಪಾಟೀಲರವರು ಸಹ ಪಿತ್ರಾರ್ಜಿತ ಘರಾಣೆಯ ಆಸ್ತಿಗಳಿಂದ ಬಂದ ಆದಾಯದಿಂದ ಸರ್ವೆ ನಂ.10 ರಲ್ಲಿ ಜಮೀನನ್ನು ಖರೀದಿಸಿರುತ್ತಾರೆ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತ್ಯೇಕವಾಗಿ ತಮ್ಮ ತಮ್ಮ ಆದಾಯದಿಂದ ಖರೀದಿಸಿರುತ್ತಾರೆ ಎನ್ನುತ್ತ-ರೆ.

15. ಶಿವನಗೌಡ ಹಾಗೂ ಹೇಮನಗೌಡರವರಿಗೆ ಒಕ್ಕಲುತನದ ಆದಾಯ ಬಿಟ್ಟು ಬೇರೆ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿ ಶಿವನಗೌಡರವರಿಗೆ ಗೌಡಾಡಕಿ ಇನಾಮ ಭತ್ಯೆ ಬರುತ್ತಿತ್ತು ಎನ್ನುತ್ತಾರೆ. ಸದರಿ ಸರ್ವೆ ನಂ.10 ಜಮೀನಿನ ಖರೀದಿ ಕಾಲಕ್ಕೆ ಶಿವನಗೌಡರವರಿಗೆ ಯಾವುದೇ ಗೌಡಾಡಕಿ ಇನಾಮ ಭತ್ಯೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಖರೀದಿಸುವ ಕಾಲಕ್ಕೆ ನಾನು ಜನಿಸಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೇಳಿ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ಸದರಿ ಸಮಯದಲ್ಲಿ ಶಿವನಗೌಡರವರಿಗೆ ಎಷ್ಟು ಭತ್ಯೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಆದರೂ ಸಹ ಸದರಿ ಶಿವನಗೌಡರವರಿಗೆ ಸದರಿ ಸಮಯದಲ್ಲಿ ಮಾಸಾಸನ ಬರುತ್ತಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವನಗೌಡರವರಿಗೆ ಆಸ್ತಿ ದಕ್ಕಬೇಕೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಗೂ ಪ್ರತಿವಾದಿಯರ ಮದ್ಯೆ ಈ ಹಿಂದೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸರಸ-ನಿರಸ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಸದರಿಯವರ ಮದ್ಯೆ ಪಾಲು ಆದ ಬಗ್ಗೆ ಯಾವ ದಾಖಲೆ ನೋಡಿದ್ದೇನೆ ಎಂದು ಈಗ ನೆನಪಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸದರಿಯವರ ಮದ್ಯೆ ಪಾಲು ಆದ ಬಗ್ಗೆ ನಾನು ಬರೆಯಿಸಿಲ್ಲ ಎಂದರೆ ಸರಿ.

16. ಸಣ್ಣಿಂಗಪ್ಪ ಶಿವಪ್ಪ ಬನ್ನಿಹಟ್ಟಿ ವಾದಿಯ ಗಂಡ ಎಂದರೆ ಸರಿ. ಈಗ ಸಾಕ್ಷಿಗೆ ದಿನಾಂಕಃ 23.03.1984 ರ ಒಂದು ಖರೀದಿ ಪತ್ರವನ್ನು ತೋರಿಸಿದ್ದು ಸದರಿ ಖರೀದಿ ಪತ್ರದ ಮೇಲಿರುವ ಸಹಿ ಶಿವನಗೌಡ ಹೇಮನಗೌಡ ಪಾಟೀಲರವರ ಸಹಿ ಎಂದು ಸೂಚಿಸಲಾಗಿ ಸಾಕ್ಷಿ ಸದರಿ ಸಹಿ ಶಿವನಗೌಡ ಹೇಮನಗೌಡ ಪಾಟೀಲರವರ ಸಹಿ ಅಲ್ಲ ಎನ್ನುತ್ತಾರೆ. ಸದರಿ ಖರೀದಿ ಪತ್ರವನ್ನು ನಿಪಿ-27 ಎಂದು ಗುರುತಿಸಲಾಯಿತು. ಸದರಿ ಸಹಿ ಶಿವನಗೌಡ ಹೇಮನಗೌಡ ಪಾಟೀಲರವರ ಸಹಿ ಎಂದು ಒಪ್ಪಿಕೊಂಡರೆ ನಿಡಿ-7 ರ ಮೇಲಿರುವ ಶಿವನಗೌಡ ಹೇಮನಗೌಡ ಪಾಟೀಲರವರ ಸಹಿಗೂ ಹಾಗೂ ನಿಪಿ-27 ರ ಮೇಲಿರುವ ಸಹಿಗೂ ವ್ಯತ್ಯಾಸ ಬರುತ್ತದೆ ಎಂದು ತಿಳಿದು ನಾನು ಉದ್ದೇಶಪೂರ್ವಕವಾಗಿ

ಅದನ್ನು ಒಪ್ಪುತ್ತಿಲ್ಲ ಎಂದರೆ ಸರಿಯಲ್ಲ. ಶಿವನಗೌಡ ಹೇಮನಗೌಡ ಪಾಟೀಲರವರು ಪಾರ್ಶ್ವವಾಯು ಖಾಯಿಲೆಯಿಂದ ಬಳಳುತ್ತಿದ್ದರಿಂದ ಸದರಿಯವರು ಉಪನೊಂದಣಾಧಿಕಾರಿ ಕಚೇರಿ ಬ್ಯಾಡಗಿಗೆ ಬಂದು ದಾನ ಪತ್ರ ಬರೆದುಕೊಡುವ ಪ್ರಸಂಗ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಶಿವನಗೌಡ ಹೇಮನಗೌಡ ಪಾಟೀಲರವರ ಪೋಟೊವನ್ನು ಹಾಗೂ ಆತನ ಸಹಿಯನ್ನು ನಾನು ಹಾಗೂ ಉಪನೊಂದಣಾಧಿಕಾರಿಯವರು ಸೇರಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

17. ಸದರಿ ಶಿವನಗೌಡ ಹೇಮನಗೌಡ ಪಾಟೀಲರವರು ನಿಡಿ-7 ದಾನಪತ್ರ ಹುಟ್ಟಿಸಿಕೊಂಡ ಒಂದು ತಿಂಗಳ ಒಳಗಾಗಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಶಿವನಗೌಡ ಹೇಮನಗೌಡ ಪಾಟೀಲರವರಿಗೆ ದಾನ ಪತ್ರ ಬರೆದುಕೊಡುವ ಸಂದರ್ಭ ಹಾಗೂ ಉಪನೊಂದಣಾಧಿಕಾರಿ ಕಚೇರಿಗೆ ಬರುವ ಸಾಮರ್ಥ ಇರಲಿಲ್ಲ ಆದರೂ ಸಹ ಆತ ದಾನ ಪತ್ರ ಬರೆದುಕೊಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.